आज़ादी का अमृत महोत्सव

KMDC

# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ದಾವಣಗೆರೆ ಜಿಲ್ಲೆ


(ಕರ್ನಾಟಕ ಸರ್ಕಾರದ ಸ್ವಾಮ್ಯದ ಉದ್ಯಮ)

ಕುರುಬರ ಹಾಸ್ಟೆಲ್‌ಕಟ್ಟಡ, ಹದಡಿರಸ್ತೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ

ದೂರವಾಣಿ ಸಂಖ್ಯೆ : 08192-232349 E-mail=dmkmdcdvg111@gmail.com


ಸಂ:ಕಅಅನಿ/ಜಿವ್ಯದಾ/ಆರ್.ಟಿ.ಐ/2022-23/12 ದಿನಾಂಕ: 18/04/2022

ಗೆ ,

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ),
ಬೆಂಗಳೂರು.

ಮಾನ್ಯರೇ,

**ವಿಷಯ:** ಮಾಹಿತಿ ಹಕ್ಕು ಅಧಿನಿಯಮ 2005 ರ ಕಲಂ 19(3) ರ ಅಡಿಯಲ್ಲಿ ನಿಗಮದ ವ್ಯಾಪ್ತಿಗೆ ಬರುವ 4(1)ಎ ಹಾಗೂ 4(1)ಬಿ ಯನ್ನು ತಯಾರಿಸಿ ವೆಬ್‌ಸೈಟ್‌ನಲ್ಲಿ ಅಳವಡಿಸುವ ಕುರಿತು.

**ಉಲ್ಲೇಖ:** ಕೇಂದ್ರ ಕಛೇರಿಯ ಪತ್ರದ ಕ್ರ.ಸಂ: ಕಅಅನಿ/ಸಿಬಂದಿ.ಹೆ.ಪ್ರ/2022-23/3491 ದಿನಾಂಕ: 23-03-2022

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಪಟ್ಟಂತೆ ಮಾಹಿತಿ ಹಕ್ಕು ಅಧಿನಿಯಮ 2005 ರ ಕಲಂ 19(3) ರ ಅಡಿಯಲ್ಲಿ ನಿಗಮದ ವ್ಯಾಪ್ತಿಗೆ ಬರುವ 4(1)ಎ ಹಾಗೂ 4(1)ಬಿ ಯ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲು ಉಲ್ಲೇಖದ ಪತ್ರದಲ್ಲಿ ಮಾಹಿತಿಯನ್ನು ಕಳುಹಿಸಿ ಕೊಡಲು ತಿಳಿಸಿರುವ ರಿತ್ಯ ಮಾಹಿತಿಯನ್ನು ಸಿದ್ದಪಡಿಸಿ PDF ಮುಖಾಂತರ ಕೇಂದ್ರ ಕಛೇರಿಗೆ ಕಳುಹಿಸಲಾಗಿರುತ್ತದೆ ಎಂಬ ಅಂಶವನ್ನು ತಮ್ಮ ಮಾಹಿತಿಗಾಗಿ ಸಲ್ಲಿಸಲಾಗಿದೆ.

**ವಂದನೆಗಳೊಂದಿಗೆ,**

ತಮ್ಮ ನಂಬುಗೆಯ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ
ಅಭಿವೃದ್ಧಿ ನಿಗಮ(ನಿ)
ದಾವಣಗೆರೆ ಜಿಲ್ಲೆ.

ಲಗತ್ತು : 15 ಪುಟಗಳ ಮಾಹಿತಿ

Scanned with CamScanner

| ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ), ದಾವಣಗೆರೆ ಜಿಲ್ಲೆ. | | |
|---|---|---|
| 2022-23ನೇ ಸಾಲಿನಲ್ಲಿ ನಿಗಮದ ಜಿಲ್ಲಾ ಕಛೇರಿಯಲ್ಲಿ ಕಡತಗಳನ್ನು ನಿರ್ವಹಿಸಿರುವ 4(1)(ಎ) ಅಡಿಯಲ್ಲಿ ಯೋಜನಾವಾರು ಮಾಹಿತಿ ವಿವರ. | | |
| ಕ್ರ ಸಂ | ಕಡತ ಸಂಖ್ಯೆ | ವಿಷಯ |
| 1 | ಕಅಅನಿ/ಜಿವ್ಯದಾ/ಮ.ಪಾ.ಕ./ಸಿಆರ್-01/2022-23 | ಮರುಪಾವತಿ ಮಾಹಿತಿ ಕಡತ |
| 2 | ಕಅಅನಿ/ಜಿವ್ಯದಾ/ಸಾ.ಕ/ಸಿಆರ್-02/2022-23 | ಸಾದಿಲ್ವಾರು ಮಾಹಿತಿ ಕಡತ |
| 3 | ಕಅಅನಿ/ಜಿವ್ಯದಾ/ಕೆ.ಡಿ.ಪಿ/ಸಿಆರ್-03/2022-23 | ಕೆಡಿಪಿ ಮಾಹಿತಿ ಕಡತ |
| 4 | ಕಅಅನಿ/ಜಿವ್ಯದಾ/ಲೀ.ಬ್ಯಾ./ಸಿಆರ್-04/2022-23 | ಲೀಡ್‌ಬ್ಯಾಂಕ್ ಮಾಹಿತಿ ಕಡತ |
| 5 | ಕಅಅನಿ/ಜಿವ್ಯದಾ/ವಾ.ಕ್ರಿ.ಯೋ./ಸಿಆರ್-05/2022-23 | ವಾರ್ಷಿಕ ಕ್ರಿಯಾ ಯೋಜನೆ ಕಡತ |
| 6 | ಕಅಅನಿ/ಜಿವ್ಯದಾ/ಅರಿವು/ಸಿಆರ್-05/2022-23 | ಅರಿವು ಸಾಲ ಫ್ರೆಶ್/ಸಿಇಟಿ/ನೀಟ್ ಮಾಹಿತಿ ಕಡತ |
| 7 | ಕಅಅನಿ/ಜಿವ್ಯದಾ/ಅರೆ.ಸ ಪ/ಸಿಆರ್-07/2022-23 | ಅರೆ ಸರ್ಕಾರಿ ಪತ್ರ |
| 8 | ಕಅಅನಿ/ಜಿವ್ಯದಾ/ಟ್ಯಾ.ಗೂ.ಪ್ಯಾ./ಸಿಆರ್-09/2022-23 | ಟ್ಯಾಕ್ಸಿ/ಗೂಡ್ಸ್/ಆಟೋರಿಕ್ಷಾ ವಾಹನ ಖರೀದಿ ಯೋಜನೆಯ ಮಾಹಿತಿ ಕಡತ |
| 9 | ಕಅಅನಿ/ಶ್ರ.ಶ./ಜಿವ್ಯದಾ/ಸಿಆರ್-09/2022-23 | ಶ್ರಮಶಕ್ತಿ ಸಾಲ ಯೋಜನೆ ದಾವಣಗೆರೆ ಗ್ರಾಮಾಂತರ ತಾಲ್ಲೂಕು |
| 10 | ಕಅಅನಿ/ಮೈ.ಕೋ-19/ಜಿವ್ಯದಾ./ಸಿಆರ್-10/2022-23 | ಮೈಕ್ರೋ ಕೋವಿಡ್-19 (ವೈಯಕ್ತಿಕ ಮಹಿಳೆಯರಿಗೆ) ಸಾಲ ಯೋಜನೆ ದಾವಣಗೆರೆ ಗ್ರಾಮಾಂತರ ತಾಲ್ಲೂಕು |
| 11 | ಕಅಅನಿ/ಗಂ.ಕ.ಯೋ/ಜಿವ್ಯದಾ./ಸಿಆರ್-11/2022-23 | ಗಂಗಾ ಕಲ್ಯಾಣ ಯೋಜನೆ ದಾವಣಗೆರೆ ಜಿಲ್ಲೆ |
| 12 | ಕಅಅನಿ/ಶಿ.ಜಿ/ಕಂಪ್ಯೂಟರ್,ಉಪಕರಣ/ಸಿ.ಆರ್-12/2022-23 | ಕಂಪ್ಯೂಟರ್ ಉಪಕರಣ ಖರೀದಿ ಮಾಹಿತಿ ಕಡತ |
| 13 | ಸಂ.ಜಿವ್ಯ/ಕಅಅನಿ/ಜಿವ್ಯದಾ/ಕಂಪ್ಯೂಟರ್ ಡಿಜಿಟಲ್/ಸಿ.ಆರ್-13/2022-23 | ಕಂಪ್ಯೂಟರ್ ಡಿಜಿಟಲ್ ಮಾಹಿತಿ ಕಡತ |
| 14 | ಕಅಅನಿ/ಮಾ.ಹ/ಸಿ.ಆರ್-14/2022-23 | ಮಾಹಿತಿ ಹಕ್ಕು 4(1)ಎ ಮತ್ತು 4(1)ಬಿ ಮಾಹಿತಿ ಕಡತ |

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ನಿ.,
ದಾವಣಗೆರೆ ಜಿಲ್ಲೆ.

Scanned with CamScanner

आज़ादी का अमृत महोत्सव


# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ದಾವಣಗೆರೆ ಜಿಲ್ಲೆ

(ಕರ್ನಾಟಕ ಸರ್ಕಾರದ ಸ್ವಾಮ್ಯದ ಉದ್ಯಮ)

ಕುರುಬರ ಹಾಸ್ಟೆಲ್‌ಕಟ್ಟಡ, ಹದಡಿರಸ್ತೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ

ದೂರವಾಣಿ ಸಂಖ್ಯೆ : 08192-232349 E-mail=dmkmdcdvg111@gmail.com


ಕಅಅನಿ/ಜಿವ್ಯದಾ/ಮಾ.ಹ/ಸಿ.ಆರ್/2022-23 ದಿನಾಂಕ: 18/04/2022

## ಅಧಿಸೂಚನೆ:

ಭಾರತ ಸರ್ಕಾರದ 2005ರ ಮಾಹಿತಿ ಹಕ್ಕು ಕಾಯ್ದೆ(ಕೇಂದ್ರ ಕಾಯ್ದೆ ಸಂಖ್ಯೆ:22/2005)ಚಾಪ್ಟರ್-11 ಸೆಕ್ಷನ್ 4(1)(ಬಿ) ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರವಾದ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಾರ್ವಜನಿಕ ತಿಳುವಳಿಕೆಗಾಗಿ ನೀಡಲಾಗಿದೆ.

### 4(1)(ಬಿ)(೧)ರನ್ವಯ, ಸಂಸ್ಥೆಯ ರಚನೆ ಹಾಗೂ ಅದರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು.

ದಾವಣಗೆರೆ ಜಿಲ್ಲೆಯಲ್ಲಿ ಮತೀಯ ಅಲ್ಪಸಂಖ್ಯಾತರ ಜನಸಂಖ್ಯೆಯು 2011 ರ ಜನಗಣತಿ ಪ್ರಕಾರ 278113 ಇದ್ದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.14.30 ಆಗಿರುತ್ತದೆ. ರಾಜ್ಯದಲ್ಲಿ ಹಾಗೂ ಜಿಲ್ಲೆಯಲ್ಲಿ ವಾಸಿಸುತ್ತಿರುವ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧ ಧರ್ಮಿಯರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರು ಮತೀಯ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿರುತ್ತಾರೆ. ಅಲ್ಪಸಂಖ್ಯಾತರ ಸಮುದಾಯದ ಬಹುಪಾಲು ಜನರು ಬಡತನ ರೇಖೆಯ ಕೆಳಗಿ ಇದ್ದು ಅವರ ಸಾಮಾಜಿಕ ಶೈಕ್ಷಣೀಕ ಮತ್ತು ಆರ್ಥೀಕ ಸ್ಥಿತಿಗತಿಯನ್ನು ಉತ್ತಮ ಪಡಿಸುವ ಸಲುವಾಗಿ ನಿಗಮವನ್ನು ಸ್ಥಾಪಿಸಲಾಗಿದೆ.

### *ನಿಗಮದ ರಚನೆ*

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ರಾಜ್ಯ ಸರ್ಕಾರ ಸ್ವಾಮ್ಯದ ಉದ್ಯಮವಾಗಿದ್ದು 1956 ರ ಕಂಪನಿ ಅಧಿನಿಯಮ ಅನ್ವಯ ಸ್ಥಾಪಿಸಲ್ಪಟ್ಟಿದೆ. ನಿಗಮದ ಅಧಿಕೃತ 150.00 ಕೋಟಿ ಇರುತ್ತದೆ. ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೇಲ್ವಿಚಾರಣೆಯಲ್ಲಿ ನಿಗಮವು ಕಾರ್ಯನಿರ್ವಹಿಸುತ್ತಿದೆ. ನಿಗಮದ ನೊಂದಾಯಿತ ಕಛೇರಿ ಬೆಂಗಳೂರಿನಲ್ಲದ್ದು ಇದರ ಜಿಲ್ಲಾ ಕಛೇರಿಗಳು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇರುತ್ತದೆ. ನಿಗಮದ ನಿರ್ದೇಶಕರ ಮಂಡಳಿಯ ಅಧ್ಯಕ್ಷರು ಕಾರ್ಯಕಾರಿ ಮುಖ್ಯಸ್ಥರಾಗಿದ್ದು ವ್ಯವಸ್ಥಾಪಕ ನಿರ್ದೇಶಕರು ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಸರ್ಕಾರದ ಪ್ರಯೋಜಿತ ಯೋಜನೆಗಳನ್ನು ನಿಗಮದ ಜಿಲ್ಲಾ ಕಛೇರಿಗಳ ಮೂಲಕ ಅನುಷ್ಠಾನ ಗೊಳಿಸಿ ಮತೀಯ ಅಲ್ಪಸಂಖ್ಯಾತರ ಸಾಮಾಜಿಕ ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವ ದೃಷ್ಟಿಯಿಂದ ನಿಗಮವನ್ನು ರಚನೆ ಮಾಡಲಾಗಿರುತ್ತದೆ.

### *ನಿಗಮದ ಉದ್ದೇಶಗಳು:*

ಮತೀಯ ಅಲ್ಪ ಸಂಖ್ಯಾತ ಸಮುದಾಯದ ಸಾಮಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವ ಜವಾಬ್ದಾರಿಯನ್ನು ಮೊದಲು ಸ್ಥಾಪಿಸಿದ ಕರ್ನಾಟಕ ಹಿಂದುಳಿದ ಅಭಿವೃದ್ಧಿ ನಿಗಮಕ್ಕೆ ಡಿ. ದೇವರಾಜ್ ಅರಸು ಹಿದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನ ಗೋಳ್ಳುತ್ತಿದ್ದ ಯೋಜನೆಗಳು ಮತೀಯ ಅಲ್ಪಸಂಖ್ಯಾತರ ಸ್ಥಿತಿಗತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಹೆಚ್ಚಿನ ಪರಿಣಾಮವನ್ನು ಬೀರುತ್ತಿಲ್ಲ ಎಂಬ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿ.
ದಾವಣಗೆರೆ ಜಿಲ್ಲೆ.

Scanned with CamScanner

आजादी का अमृत महोत्सव

ಅಂಶದಿಂದಾಗಿ ಮತ್ತು ರಾಜ್ಯದ ಮತೀಯ ಅಲ್ಪಸಂಖ್ಯಾತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಉತ್ತಮ ಪಡಿಸುವ ಸಲುವಾಗಿ ಹಾಗೂ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಏಕೈಕ ಉದ್ದೇಶದಿಂದ ಅಂದಿನ ಮುಖ್ಯಮಂತ್ರಿಯಾಗಿದ್ದ ದಿವಂಗತ ರಾಮಕೃಷ್ಣ ಹೆಗಡೆ ರವರ ನೇತೃತ್ವದ ಸರ್ಕಾರವು ದಿನಾಂಕ: 07-02-1986 ರಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಎಂಬ ಪ್ರತ್ಯೇಕ ನಿಗಮವನ್ನು ಸ್ಥಾಪಿಸಿತು. ರಾಜ್ಯದ ಮತೀಯ ಅಲ್ಪಸಂಖ್ಯಾತರ ಸಮುದಾಯಗಳ ಕಡುಬಡವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಮತ್ತು ಅವರಿಗೆ ಸಾಮಾಜಿಕ ನ್ಯಾಯ ಕಲ್ಪಿಸುವುದು ಹಾಗೂ ಅವರ ಸಾಮಾಜಿಕ ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವುದು ನಿಗಮದ ಮುಖ್ಯ ಉದ್ದೇಶವಾಗಿರುತ್ತದೆ.

ಪ್ರಸ್ತುತ ಕರ್ನಾಟಕ ಅಲ್ಪಸಂಖ್ಯಾತರ ಜನಾಂಗದ ಜನರು ಸ್ವಯಂ ಉದ್ಯೋಗ ಕೈಗೊಂಡ ಅವರ ಆರ್ಥಿಕಾಭಿವೃದ್ಧಿ ಸಾಧಿಸಲು ನಿಗಮವು 2022-23ನೇ ಸಾಲಿಗೆ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

***(ಅ) ರಾಜ್ಯ ಸರ್ಕಾರದ ಯೋಜನೆಗಳು:***

1. ಅರಿವು ಸಾಲ ಯೋಜನೆ, (ವಿದಾಭ್ಯಾಸಕ್ಕಾಗಿ)
2. ಶ್ರಮಶಕ್ತಿ ಸಾಲ ಯೋಜನೆ,
3. ಕಿರುಸಾಲ ಯೋಜನೆ,
4. ಗಂಗಾ ಕಲ್ಯಾಣ ಯೋಜನೆ,
5. ಮೈಕ್ರೋ ಕೋವಿಡ್-19 (ವೈಯಕ್ತಿಕ ಮಹಿಳೆಯರಿಗೆ) ಸಾಲ ಯೋಜನೆ
6. ಟ್ಯಾಕ್ಸಿ/ಗೂಡ್ಸ್/ಆಟೋ ರಿಕ್ಷಾ ವಾಹನ ಖರೀದಿಗಾಗಿ ಸಹಾಯಧನ ಯೋಜನೆ,

**ರಾಜ್ಯ ಸರ್ಕಾರದ ಯೋಜನೆಗಳು:-**

**1). ಅರಿವು ಸಾಲ ಯೋಜನೆ:-**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿರುತ್ತಿರುವ ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯನ್ನು 2022-23ನೇ ಸಾಲಿಗೆ ಅನ್ವಯವಾಗುವಂತೆ ಹೊಸ (ಫ್ರೆಶ್) ಮತ್ತು ನವೀಕರಣ ಪ್ರಕರಣಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ ವೈದ್ಯಕೀಯ/ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಮಾತ್ರ ಸಾಲವನ್ನು ನೀಡಲಾಗುವುದು.

1. ಹೊಸ ಮತ್ತು ನವೀಕರಣ ಅರ್ಜಿಗಳನ್ನು ಆನ್‌ಲೈನ್ ತಂತ್ರಾಂಶದ ಮೂಲಕ ಸಲ್ಲಿಸಬೇಕು.
2. ಆಯಾ ಜಿಲ್ಲಾ ಕಛೇರಿಗಳಲ್ಲಿ ಆನ್‌ಲೈನ್ ನವೀಕರಣ ಅರ್ಜಿಗಳನ್ನು ಸಲ್ಲಿಸುವಾಗ ಹಿಂದಿನ ವರ್ಷದಲ್ಲಿ ನಿಗಮದಿಂದ ಪಡೆದ ಒಟ್ಟು ಸಾಲದ ಬಾಕಿಯ ಶೇ. 12% ರಷ್ಟನ್ನು ವಿದ್ಯಾರ್ಥಿಗಳು ಪಾವತಿಸಬೇಕಾಗುತ್ತದೆ.
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ ವೃತ್ತಿಪರ ಕೋರ್ಸ್‌ಗಳಿಗೆ ಮಾತ್ರ ಸಾಲ ಸೌಲಭ್ಯ ಅನ್ವಯಿಸುತ್ತದೆ.
4. 2ಬಿ ವರ್ಗಕ್ಕೆ ಸೇರಿದ (ಆದಾಯ ಮಿತಿ ರೂ. 8.00 ಲಕ್ಷಗಳನ್ನು ಮೀರಿರಬಾರದು) ವಿದ್ಯಾರ್ಥಿಯ ತಹಶೀಲ್ದಾರರಿಂದ ಪಡೆದ ಜಾತಿ/ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
5. ವಿದ್ಯಾರ್ಥಿಗಳಿಗೆ ಸಾಲದ ಮೊತ್ತವನ್ನು ನಿಗಮದಿಂದ ನೇರವಾಗಿ ಡಿಬಿಟಿ ಮೂಲಕ ಕಾಲೇಜಿನ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತದೆ.
6. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (CET/NEET) ಆಯ್ಕೆಯಾದ ಒಃಃಖ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಗರಿಷ್ಠ ರೂ. 2.00 ಲಕ್ಷದವರೆಗೆ ಬಿಡುಗಡೆ ಮಾಡಲಾಗುವುದು. (ಹೊಸ ಮತ್ತು ರಿನೀವಲ್ ಪ್ರಕರಣಕ್ಕೆ)
7. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (CET/NEET) ಆಯ್ಕೆಯಾದ BDS ಹಾಗೂ AYUSH ಪದವಿ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ನಿ.
ದಾವಣಗೆರೆ ಜಿಲ್ಲೆ.

Scanned with CamScanner

ವಿದ್ಯಾರ್ಥಿಗಳಿಗೆ ಗರಿಷ್ಠ ರೂ. 30,000/- ಗಳನ್ನು ಬಿಡುಗಡೆ ಮಾಡಲಾಗುವುದು. (ಹೊಸ ಮತ್ತು ರಿನೀವಲ್ ಪ್ರಕರಣಕ್ಕೆ)

8. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (CET/NEET) ಆಯ್ಕೆಯಾದ ಅಂದರೆ ಬ್ಯಾಚುಲರ್ ಆಫ್ ಆರ್ಕಿಟೆಕ್ಟ್/ಇಂಜಿನಿಯರಿಂಗ್/ಟೆಕ್ನಾಲಜಿ BE/B TECH ಕೋರ್ಸ್ ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಗರಿಷ್ಠ ರೂ. 30,000/- ಗಳನ್ನು (ಹೊಸ ಮತ್ತು ರಿನೀವಲ್ ಪ್ರಕರಣಗಳಿಗೆ) ಬಿಡುಗಡೆ ಮಾಡಲಾಗುತ್ತದೆ.

ಸಾಲ ಪಡೆಯಬಯಸುವ ಅಭ್ಯರ್ಥಿಗಳು **https://kmdconline.karnataka.gov.in** ಇದಕ್ಕೆ ಲಾಗ್ ಇನ್ ಮಾಡಿಕೊಳ್ಳಬೇಕು ಮತ್ತು ಅರ್ಜಿಯನ್ನು ಭರ್ತಿ ಮಾಡಬೇಕು. ಅರ್ಜಿಯ ಪ್ರಿಂಟ್‌ಔಟ್‌ನ್ನು ತೆಗೆದುಕೊಂಡು ಕೆಳಕಂಡ ದಾಖಲಾತಿಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರವರ ಕಛೇರಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಕುರುಬರ ಹಾಸ್ಟೆಲ್ ಕಟ್ಟಡ, ಹದಡಿ ರಸ್ತೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ ಜಿಲ್ಲಾ ಕಛೇರಿಗೆ ಸಲ್ಲಿಸಬೇಕು.

1. ಅರ್ಜಿದಾರರ / ಅಭ್ಯರ್ಥಿಯ ಪಾಸ್‌ಪೋರ್ಟ್ ಅಳತೆಯ 4 ಭಾವಚಿತ್ರ (Photos)
2. ಜಾತಿ ಮತ್ತು ಆದಾಯ ಪ್ರಮಾಣ ಪತ್ರ ರೂ. 8.00 ಲಕ್ಷಗಳ ವರೆಗೆ.
3. ವಿಳಾಸ ದೃಡಿಕರಣ ಪ್ರಮಾಣ ಪತ್ರ: ಮತದಾರರ ಚೀಟಿ (VoterID)/ ಪಡಿತರ ಚೀಟಿ (Ration card)/ಆಧಾರ್ ಚೀಟಿ (Adhaar Card)
4. CET ಪ್ರವೇಶ ಪ್ರತಿ /ಕಾಲೇಜ್ ಪ್ರವೇಶ ಪ್ರತಿ/ಸಿ.ಎ.ಸಿ ಆದೇಶ
5. ವ್ಯಾಸಂಗ ಪ್ರಮಾಣ ಪತ್ರ (ಇತ್ತೀಚಿನ ಕೋರ್ಸು)
6. Indiminity ಬಾಂಡ್ ರೂ.50/- ಛಾಪಾ ಕಾಗದ ಮೇಲೆ ತಂದೆ/ತಾಯಿ/ಪೋಷಕರ ಸಹಿ ಮತ್ತು ಇತ್ತೀಚಿನ 2 ಭಾವ ಚಿತ್ರ.
7. ವಿದ್ಯಾರ್ಥಿಯು ಅಭ್ಯಾಸ ಮಾಡುವ ಕಾಲೇಜಿನ / ಸಂಸ್ಥೆಯ ಬ್ಯಾಂಕ್ ಖಾತೆ ಮತ್ತು ಐಎಫ್ಎಸ್ಸಿ ಸಂಖ್ಯೆ ಮತ್ತು ಕಾಲೇಜಿನ email Id ವಿದ್ಯಾರ್ಥಿಯ ದೂರವಾಣಿ ಸಂಖ್ಯೆ (Mobile No.) ಕಡ್ಡಾಯವಾಗಿ ಸಲ್ಲಿಸಬೇಕು.
8. ಶುಲ್ಕ ಪಾವತಿ ಮಾಡಿರುವ ದೃಢೀಕರಣ ಬಿಲ್ಲುಗಳು/ರಶೀದಿಗಳನ್ನು ಸಲ್ಲಿಸಬೇಕು.
9. ನವೀಕರಣ ಪ್ರಸ್ತಾವನೆಗೆ ಹಿಂದಿನ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣವಾದ ಅಂಕಪಟ್ಟಿ ನಕಲು ಅಥವಾ ದೃಡಿಕರಣ ಪತ್ರ ಸಲ್ಲಿಸಬೇಕು.

ಕಳೆದ ಸಾಲಿನಲ್ಲಿ ಸಾಲ ಬಿಡುಗಡೆ ಯಾಗಿರುವ ಅಭ್ಯರ್ಥಿಗಳಿಗೆ ಮಾತ್ರ 2, 3, 4 ಮತ್ತು 5ನೇ ವರ್ಷದ ಸಾಲ ಬಿಡುಗಡೆಯ ಪ್ರಸ್ತಾವನೆ, ಅಭ್ಯರ್ಥಿಗಳಿಂದ ಸ್ವಯಂ ಲಿಖಿತ ಪಡೆದ ಅರ್ಜಿ ಮತ್ತು ಅದರ ಜೊತೆ ಕಾಲೇಜಿನ ವ್ಯಾಸಂಗ ಮಾಡುತ್ತಿರುವ ದೃಡೀಕರಣ ಪತ್ರ ಮತ್ತು ಅಂಕಪಟ್ಟಿ ಹಾಗೂ ಈ ಹಿಂದೆ ನಿಗಮದಿಂದ ಬಿಡುಗಡೆ ಮಾಡಿರುವ ಸಾಲದ ಮೊತ್ತಕ್ಕೆ ಶೇಕಡ 10 ರಷ್ಟು ಮತ್ತು ಶೇಕಡ 2% ರಷ್ಟು ಸೇವಾ ಶುಲ್ಕ ಸೇರಿದಂತೆ ಒಟ್ಟು ಶೇ.12% ರಷ್ಟು ಸಾಲ ಮರುಪಾವತಿ ಮಾಡಿದ ನಕಲು ರಸೀದಿಯನ್ನು ಮೂಲ ಕಡತದ ಜೊತೆಗೆ ನಿಗಮಕ್ಕೆ ಕಳುಹಿಸಲು ಸೂಚಿಸಿದೆ ಹಾಗೂ ಅಂತಿಮ (Final)ವರ್ಷದ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ
ದಾವಣಗೆರೆ ಜಿಲ್ಲೆ.

Scanned with CamScanner

ವಿದ್ಯಾರ್ಥಿಯು ಹಿಂದಿನ ವರ್ಷಗಳ (including practical) ಪರೀಕ್ಷೆಯಲ್ಲಿ ಉತ್ತೀರ್ಣವಾದ ಅಂಕಪಟ್ಟಿಯನ್ನು ಸಲ್ಲಿಸಬೇಕು ಅಂತಹ ವಿದ್ಯಾರ್ಥಿಗಳಿಗೆ ಮುಂದಿನ ಸಾಲದ ಕಂತು ಬಿಡುಗಡೆ ಮಾಡಲಾಗುವುದು. ವಿದ್ಯಾರ್ಥಿಯು ಅಭ್ಯಾಸ ಮಾಡುವ ಕಾಲೇಜಿನ / ಸಂಸ್ಥೆಯ ಬ್ಯಾಂಕ್ ಖಾತೆ, ಜಟಚಿಟ ಖಜ ಮತ್ತು ಖಈಖಅ ಸಂಖ್ಯೆಯನ್ನು ಹಾಗೂ ವಿದ್ಯಾರ್ಥಿಯ ದೂರವಾಣಿ ಸಂಖ್ಯೆ (ಒಂಭುಟಜ ಓಂ.) ಕಡ್ಡಾಯವಾಗಿ ಸಲ್ಲಿಸಬೇಕು.

**ಆಯ್ಕೆ ವಿಧಾನ:-** ಈ ಯೋಜನೆಯಡಿಯಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಕೇಸ್ ವರ್ಕರ್ ಲಾಗಿನ್ ಮೂಲಕ ಕೇಂದ್ರ ಕಛೇರಿಯ ಕೇಸ್ ವರ್ಕರ್‌ಗೆ ಕಳುಹಿಸಿ ಆನಂತರದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಓದುತ್ತಿರುವ ಕಾಲೇಜಿನ ಪ್ರಾಂಶುಪಾಲರ ಖಾತೆಗೆ ಹಣವನ್ನು ನೆಫ್ಟ್ ಮೂಲಕ ಜಮಾ ಮಾಡಲಾಗುವುದು.

## 2. ಶ್ರಮಶಕ್ತಿ ಯೋಜನೆ:-

ರಾಜ್ಯದ ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿ ಕುಲಕಸುಬುದಾರರು ಆಧುನಿಕ ತಂತ್ರಜ್ಞಾನ ಬಳಕೆಯಿಂದಾಗಿ ತಮ್ಮ ಸಾಂಪ್ರದಾಯಿಕ ಮಾರುಕಟ್ಟೆಯನ್ನು ಹಾಗೂ ವೃತ್ತಿಕೌಶಲತೆಗೆ ಅನುಗುಣವಾಗಿ ಅಭಿವೃದ್ಧಿ ಪಡಿಸಿಕೊಳ್ಳಲು ಮತ್ತು ಆದಾಯ ಹೆಚ್ಚಿಸುವ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಅಗತ್ಯವಿರುವ ಆರ್ಥಿಕ ನೆರವನ್ನು ಕಲ್ಪಿಸುವ ಉದ್ದೇಶದಿಂದ, 'ಶ್ರಮಶಕ್ತಿ'ಯೋಜನೆಯಡಿಯಲ್ಲಿ ಘಟಕ ವೆಚ್ಚವನ್ನು ರೂ.25,000/- ದಿಂದ ರೂ.50,000/-ಕ್ಕೆ ಹೆಚ್ಚಿಸಿ ಸರ್ಕಾರವು ಅದೇಶ ಹೊರಡಿಸಿದೆ. ಘಟಕ ವೆಚ್ಚ ರೂ.50,000/-ಗಳ ಸಾಲದ ಮಂಜೂರಾತಿಯು ಸಾಂಪ್ರದಾಯಿಕ (ಪಾರಂಪರಾಗತ ಕುಶಲಕರ್ಮಿಗಳು/ವೃತ್ತಿ ಕುಲಕಸುಬುದಾರರಿಗೆ ಅನ್ವಯವಾಗುತ್ತದೆ. ಇತರೆ ವೃತ್ತಿಗಳಿಗೆ ಯೋಜನೆಯ ಲಾಭದಾಯಕತೆ ಮತ್ತು ಆದಾಯಗಳಿಕಗೆ ಅನುಗುಣವಾಗಿ ರೂ.25,000/-ಕ್ಕೆ ಮೀರದಂತೆ ಸಾಲವನ್ನು ಮಂಜೂರು ಮಾಡಲಾಗುವುದು.

ಕ್ರಿಶ್ಚಿಯನ್ ಜನಾಂಗದವರಿಗೆ ಕ್ರಿಶ್ಚಿಯನ್ ಅಭಿವೃದ್ಧಿ ಯೋಜನೆಯಡಿಯಲ್ಲಿ ಇದೇ ಯೋಜನೆಗೂ ಸಹ ಮೇಲ್ಕಂಡ ಎಲ್ಲಾ ನಿಯಮಾವಳಿಗಳು ಅನ್ವಯಿಸುತ್ತದೆ.

### ಘಟಕ ವೆಚ್ಚದ ಸಾಲ ಮತ್ತು ಸಹಾಯಧನ:

ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಕುಶಲಕರ್ಮಿಗಳು ಮತ್ತು ಸಾಂಪ್ರದಾಯಿಕ ವೃತ್ತಿದಾರರಿಗೆ ಉದ್ದೇಶಿತ ಚಟುವಟಿಕೆಗಾಗಿ ಆರ್ಥಿಕ ನೆರವನ್ನು ವೃತ್ತಿ / ಕಸುಬಿಗೆ ಮತ್ತು ಪ್ರಾದೇಶಿಕ ಅವಶ್ಯಕತೆಗೆ ಹಾಗೂ ಅರ್ಜಿದಾರರ ವೃತ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಆರ್ಥಿಕ ನೆರವು ನೀಡಲಾಗುವುದು. ಈ ರೀತಿ ನೀಡುವ ಆರ್ಥಿಕ ನೆರವು ಗರಿಷ್ಠ ರೂ.50,000/- ನೀಡಲಾಗುವುದು.

**ಆಯ್ಕೆ ವಿಧಾನ:-** ಮಾನ್ಯ ಶಾಸಕರ ನೇತೃತ್ವದಲ್ಲಿ ತಾಲ್ಲೂಕ್ ಆಯ್ಕೆ ಸಮಿತಿ ಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ತಾಲ್ಲೂಕ್ ಆಯ್ಕೆ ಸಮಿತಿ ಸಭೆಯಲ್ಲಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ. ಇದರಲ್ಲಿ ಶೇ.50ರಷ್ಟು ಸಾಲವನ್ನು ಬ್ಯಾಕ್‌ಎಂಡ್ ಸಹಾಯಧನವಾಗಿ ಪರಿಗಣಿಸಲಾಗುವುದು. ಈ ಸಾಲಕ್ಕೆ ಸಾಲಿಯಾನ ಶೇ.4ರ ಬಡ್ಡಿದರ ವಿಧಿಸಲಾಗುವುದು. ಮೂರು ವರ್ಷದ ಅವಧಿಯೊಳಗೆ ಸಾಲ ಮರುಪವಾತಿಸಿದಾಗ ಮಾತ್ರ ಶೇ.50ರಷ್ಟು ಸಹಾಯಧನವನ್ನು ಬ್ಯಾಕ್‌ಎಂಡ್ ಸಬ್ಸಿಡಿಯಾಗಿ ಸಾಲದ ಖಾತಾ ಪುಸ್ತಕದಲ್ಲಿ ಹೊಂದಾಣಿಕೆ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ನಿ.

Scanned with CamScanner

ಮಾಡಿಕೊಳ್ಳಲಾಗುವುದು. ತಪ್ಪಿದಲ್ಲಿ ಪೂರ್ಣ ಮೊತ್ತವನ್ನು ಸಾಲವನ್ನಾಗಿ ಪರಿಗಣಿಸಲಾಗುವುದು. ಯೋಜನೆ ಉದ್ದೇಶಕ್ಕಾಗಿ ಗುರ್ತಿಸಲಾದ ಸಾಂಪ್ರದಾಯಿಕ (ಪರಂಪರಾಗತ) ಕುಶಲಕರ್ಮಿಗಳು/ ವೃತ್ತಿ ಕಸುಬುಗಳಿಗೆ ಸಾಲಸೌಲಭ್ಯ ನೀಡಲಾಗುವುದು.

## 3. ಕಿರುಸಾಲ ಯೋಜನೆ:-

ಈ ಯೋಜನೆಯಡಿಯಲ್ಲಿ ನಗರ ಪ್ರದೇಶದಲ್ಲಿ ಮತ್ತು ಗ್ರಾಮಗಳಲ್ಲಿ ವಾಸವಾಗಿರುವ ಮತೀಯ ಅಲ್ಪಸಂಖ್ಯಾತರು ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದು, ಅಂತಹ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಕುಶಲ ಅಥವಾ ಕುಶಲವಲ್ಲದ ವ್ಯಕ್ತಿಗಳ ಅಭಿವೃದ್ಧಿಗಾಗಿ ಸಣ್ಣ ಪ್ರಮಾಣದ ವ್ಯಾಪಾರವನ್ನು ಮಾಡಲು ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.

ನಿಗಮದಿಂದ ಫಲಾಪೇಕ್ಷಿಗಳು ಸ್ವ-ಸಹಾಯ ಗುಂಪುಗಳನ್ನು ಇತರೆ ಇಲಾಖೆಗಳ ಅಥವಾ ಸರ್ಕಾರೇತರ ಸಂಸ್ಥೆಗಳ ಮೂಲಕ ಸಂಘಟನೆ ಮಾಡಿ ಸ್ವ ಸಹಾಯ ಗುಂಪುಗಳ ಮೂಲಕ ಯೋಜನೆಯನ್ನು ಸಿದ್ದಪಡಿಸಿ ಅನುಷ್ಠಾನಗೊಳಿಸಬಹುದಾಗಿದೆ. ಸ್ವ-ಸಹಾಯ ಗುಂಪಿನಲ್ಲಿ 10 ಜನ ರಿಂದ 20ಜನ ವರೆಗೆಮಾತ್ರ ಮಹಿಳಾ ಸದಸ್ಯರನ್ನು ಹೊಂದಿರಬೇಕಾಗುತ್ತದೆ. ಸ್ವ-ಸಹಾಯ ಗುಂಪು ಕನಿಷ್ಟ ಒಂದು ವರ್ಷದಿಂದ ಕಾರ್ಯ ನಿರ್ವಹಿಸಿತ್ತಿರಬೇಕು ಮತ್ತು ಸ್ವ-ಸಹಾಯ ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು ಒಂದು ವರ್ಷ ವಾಗಿರಬೇಕು.ಸ್ವ-ಸಹಾಯ ಸಂಘವು ಆರ್ಥಿಕ ಚಟುವಟಿಕೆಗಳಲ್ಲಿ ಲಾಭದಲ್ಲಿರಬೇಕು. ಸ್ವ-ಸಹಾಯ ಗುಂಪಿನ ಸದಸ್ಯರಾಗಿರುವ ಫಲಾನುಭವಿ ಜಮೀನು ಹೊಂದಿದ್ದಲ್ಲಿ ಅಥವಾ ಸರ್ಕಾರಿ/ಅರೆಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿದ್ದಲ್ಲಿ ಅವರಿಗೆ ಸಣ್ಣ ಪ್ರಮಾಣದ ಆರ್ಥಿಕ ಸಾಲ ಯೋಜನೆಯಡಿಯಲ್ಲಿ ಸಾಲ ಮಂಜೂರು ಮಾಡತಕ್ಕದ್ದಲ್ಲ. ಮೈಕ್ರೋಕ್ರೆಡಿಟ್ ಹಣಕಾಸು ಯೋಜನೆಯಡಿ ಮತ್ತು ಸ್ವಯಂ ಉದ್ಯೋಗ ಯೋಜನೆಯಡಿ ಶೇಕಡ 50 ರಷ್ಟು ಸಹಾಯಧನ, ಗರಿಷ್ಟ ರೂ.5,000/-ಗಳು ಪ್ರತಿ ಫಲಾನುಭವಿಗೆ ಫಲಾನುಭವಿಯ ಹೆಸರಿನಲ್ಲಿ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಸಾಲವನ್ನು ಫಲಾನುಭವಿಯ ಖಾತೆಗೆ ನೇರವಾಗಿ ನಿಗಮದಿಂದ ಜಮಾ ಮಾಡಲಾಗುತ್ತದೆ. ಸ್ವ-ಸಹಾಯ ಸಂಘಗಳು ಸಾಲವನ್ನು ಶೇಕಡ 5%ರ ಬಡ್ಡಿ ದರದಲ್ಲಿ ನಿಗಮಕ್ಕೆ ಪಾವತಿಸಬೇಕು.

**ಆಯ್ಕೆ ವಿಧಾನ:-** ಮಾನ್ಯ ಶಾಸಕರ ನೇತೃತ್ವದಲ್ಲಿ ತಾಲ್ಲೂಕ್ ಆಯ್ಕೆ ಸಮಿತಿ ಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ತಾಲ್ಲೂಕ್ ಆಯ್ಕೆ ಸಮಿತಿ ಸಭೆಯಲ್ಲಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.ಇದರಲ್ಲಿ ಶೇ.50ರಷ್ಟು ಸಾಲವನ್ನು ಬ್ಯಾಕ್‌ಎಂಡ್ ಸಹಾಯಧನವಾಗಿ ಪರಿಗಣಿಸಲಾಗುವುದು. ಈ ಸಾಲಕ್ಕೆ ಸಾಲಿಯಾನ ಶೇ.5ರ ಬಡ್ಡಿದರ ವಿಧಿಸಲಾಗುವುದು. ಮೂರು ವರ್ಷದ ಅವಧಿಯೊಳಗೆ ಸಾಲ ಮರುಪಾವತಿಸಿದಾಗ ಮಾತ್ರ ಶೇ.50ರಷ್ಟು ಸಹಾಯಧನವನ್ನು ಬ್ಯಾಕ್‌ಎಂಡ್ ಸಬ್ಸಿಡಿಯಾಗಿ ಸಾಲದ ಖಾತಾ ಪುಸ್ತಕದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ತಪ್ಪಿದಲ್ಲಿ ಪೂರ್ಣ ಮೊತ್ತವನ್ನು ಸಾಲವನ್ನಾಗಿ ಪರಿಗಣಿಸಲಾಗುವುದು.

## 4. ಗಂಗಾ ಕಲ್ಯಾಣ ಯೋಜನೆ:-

ಈ ಯೋಜನೆಯಡಿಯಲ್ಲಿ ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವಾಗ ಫಲಾನುಭವಿಯ ಜಾತಿ & ಆದಾಯ ದೃಢೀಕರಣ (ನಗರ ಪ್ರದೇಶಕ್ಕೆ ರೂ. 1,03,000/- ಮತ್ತು ಗ್ರಾಮೀಣ ಪ್ರದೇಶಕ್ಕೆ 81,000/-ರ ಒಳಗೆ) ಆರ್.ಟಿ.ಸಿ, ಮ್ಯೂಟೇಷನ್, ಸಣ್ಣ ಮತ್ತು ಅತಿ ಸಣ್ಣ ರೈತರ ದೃಢೀಕರಣ, ಇ.ಸಿ(13 ವರ್ಷದವರೆಗೆ), ಚೆಕ್ಕುಬಂದಿ, ವಂಶವೃಕ್ಷ, ಭಾವಚಿತ್ರ, ಕನಿಷ್ಠ 1.00 ಎಕರೆಯಿಂದ 5.00 ಎಕರೆ ಒಳಗೆ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ
ದಾವಣಗೆರೆ ಜಿಲ್ಲೆ.

Scanned with CamScanner

ಖುಷ್ಕಿ ಜಮೀನನ್ನು ಹೊಂದಿರಬೇಕು ಹಾಗೂ ಅರ್ಜಿಯ ದಾಖಲಾತಿಗಳನ್ನು ಪರಿಶೀಲಿಸಿ ಸ್ವೀಕರಿಸಿದ ಅರ್ಜಿಗಳನ್ನು ಆಯಾಯ ವಿಧಾನಸಭಾ ಶಾಸಕರು ಅಧ್ಯಕ್ಷರಾಗಿದ್ದು ತಾಲ್ಲೂಕು ಆಯ್ಕೆ ಸಮಿತಿಯಿಂದ ಈ ಅರ್ಜಿಗಳನ್ನು ಆಯ್ಕೆ ಮಾಡಿ ಕೊಳವೆ ಬಾವಿ ಕೊರೆಯಲು ಕೇಂದ್ರ ಕಛೇರಿಗೆ ಪ್ರಸ್ತಾವನೆ ಕಳುಹಿಸಿಕೊಡಲಾಗುವುದು. ಪ್ರತಿ ಬಾವಿ ಘಟಕದ ವೆಚ್ಚ 2.00 ಲಕ್ಷಗಳಾಗಿದ್ದು (ವಿದ್ಯೂದ್ಧಿಕರಣ ಸೇರಿದಂತೆ) ನಿಗಮವೇ ಕೊಳವೆ ಬಾವಿ ಕೊರೆಯುವಿಕೆ, ಪಂಪು ಮೋಟರ್ ಪೂರೈಕೆ ಮತ್ತು ವಿದ್ಯೂದ್ದೀಕರಣ ವೈ.ಎಂ.ಡಿ. ವೆಚ್ಚವನ್ನು ನಿಗಮವು ಭರಿಸುವುದು. ಈ ಯೋಜನೆಯಡಿಯಲ್ಲಿ ರೂ. 2,00,000/- ಗಳು ಸಹಾಯಧನವಾಗಿರುತ್ತದೆ.

**ಆಯ್ಕೆ ವಿಧಾನ:-** ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ತಾಲ್ಲೂಕ್ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ತಾಲ್ಲೂಕ್ ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಕಳುಹಿಸಿ, ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್‌ದಾರರಿಂದ ಕೊಳವೆ ಬಾವಿ ಕೊರೆಯಿಸಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

**5. ಟ್ಯಾಕ್ಸಿ/ಗೂಡ್ಸ್/ಆಟೋ ರಿಕ್ಷಾ ವಾಹನ ಖರೀದಿಗಾಗಿ ಸಹಾಯಧನ ಯೋಜನೆ :-**

ಈ ಯೋಜನೆಯಲ್ಲಿ ವಿವಿಧ ಬ್ಯಾಂಕುಗಳ ಮೂಲಕ ಟ್ಯಾಕ್ಸಿ/ಗೂಡ್ಸ್/ಆಟೋ ರಿಕ್ಷಾ ವಾಹನವನ್ನು ಖರೀದಿಸಲು ನಿಗಮದಿಂದ ತಲಾ 75,000/- ರೂ. ಸಹಾಯಧನ ಹಾಗೂ ಉಳಿದ ಹಣ ಬ್ಯಾಂಕ್ ಸಾಲ ಪಡೆಯಬಹುದು ಮತ್ತು ಈ ಯೋಜನೆಯಡಿಯಲ್ಲಿ ಖರೀದಿಸುವ ವಾಹನದ ಮೌಲ್ಯವು ಕನಿಷ್ಠ ರೂ.4.00 ಲಕ್ಷಗಳಿಂದ ಗರಿಷ್ಠ ರೂ.7.50 ಲಕ್ಷಗಳಾಗಿರತಕ್ಕದ್ದು. (ತೆರಿಗೆಯನ್ನು ಹೊರತುಪಡಿಸಿ)

**ಆಯ್ಕೆ ವಿಧಾನ:-** ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಜಿಲ್ಲಾ ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಹಾಯಧನವನ್ನು ಮಂಜೂರು ಮಾಡಲಾಗುತ್ತದೆ.

**6) ಮೈಕ್ರೋ ಕೋವಿಡ್-19 (ವೈಯಕ್ತಿಕ ಮಹಿಳೆಯರಿಗೆ) ಸಾಲ ಯೋಜನೆ :-**

ಈ ಯೋಜನೆಯಡಿ ಕೋವಿಡ್-19 ನಿಂದಾಗಿ ತೊಂದರೆಗೊಳಗಾದ, ನಿಗಮದ ಯಾವುದೇ ಯೋಜನೆಯಡಿ ಇದುವರೆಗೆ ಸಾಲ /ಸಹಾಯಧನ ಯಾವುದನ್ನೂ ಪಡೆಯದ ಕಡುಬಡತನದಲ್ಲಿರುವ ಅಲ್ಪಸಂಖ್ಯಾತ ಸಮುದಾಯದ ಬಿಪಿ ಎಲ್ ಕಾರ್ಡ್ ಹೊಂದಿರುವ 25 ರಿಂದ 50 ವಯೋಮಾನದೊಳಗಿನ ಮಹಿಳೆಯರಿಗೆ, ತಳ್ಳುವ ಗಾಡಿಯಲ್ಲಿ ವ್ಯಾಪಾರ, ಬೀದಿವ್ಯಾಪಾರ, ಜಾತ್ರೆಗಳಲ್ಲಿ ವ್ಯಾಪಾರ, ಕಿರಾಣಿ ಅಂಗಡಿ, ಅರಿಷಿನ/ಕುಂಕುಮ/ಅಗರಬತ್ತಿ/ಕರ್ಪೂರ, ಪಾದಚಾರಿ ಮಾರ್ಗದಲ್ಲಿ ಟೀ/ಕಾಫಿ ಮಾರಾಟ, ಎಳೆನೀರು ವ್ಯಾಪಾರ, ಹೂವಿನ ವ್ಯಾಪಾರ, ತರಕಾರಿ ವ್ಯಾಪಾರ, ಹಣ್ಣಿನ ವ್ಯಾಪಾರ ಹೀಗೆ ಇನ್ನಿತರ ಸಣ್ಣ ವ್ಯಾಪಾರ ನಡೆಸಲು ಆರಂಭಿಕ ಬಂಡವಾಳಕ್ಕಾಗಿ ರೂ. 10,000/- ಮೊತ್ತದ (ರೂ. 8000/- ಸಾಲ ಹಾಗೂ ರೂ. 2000/- ಸಹಾಯಧನ) ಅಲ್ಪಾವಧಿ ಸಾಲ ನೀಡಲಾಗುವುದು.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ನಿ.
ದಾವಣಗೆರೆ ಜಿಲ್ಲೆ.

Scanned with CamScanner


**ಆಯ್ಕೆ ವಿಧಾನ:-** ಮಾನ್ಯ ಶಾಸಕರ ನೇತೃತ್ವದಲ್ಲಿ ತಾಲ್ಲೂಕ್ ಆಯ್ಕೆ ಸಮಿತಿ ಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ತಾಲ್ಲೂಕ್ ಆಯ್ಕೆ ಸಮಿತಿ ಸಭೆಯಲ್ಲಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

**ಮೇಲ್ಕಂಡ ಯೋಜನೆಗಳಡಿಯಲ್ಲಿ ಸಾಲಸೌಲಭ್ಯ ಪಡೆಯಲು ಇರಬೇಕಾದ ಅರ್ಹತೆಗಳು ಮತ್ತು ಮಾನದಂಡ ಈ ಕೆಳಕಂಡಂತಿವೆ.**

1. ಫಲಾನುಭವಿಯು ಮತೀಯ ಅಲ್ಪಸಂಖ್ಯಾತರು ಅಂದರೆ ಮುಸ್ಲಿಂ, ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು, ಪಾರ್ಸಿ ವರ್ಗಕ್ಕೆ ಸೇರಿದವರಾಗಬೇಕು.
2. ಅರ್ಜಿದಾರರು ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 10 ವರ್ಷ ವಾಸವಾಗಿರಬೇಕು.
3. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ಗ್ರಾಮಾಂತರ ಪ್ರದೇಶದವರಿಗೆ ರೂ.81,000/-, ಮತ್ತು ನಗರ ಪ್ರದೇಶದವರಿಗೆ ರೂ.1,03,000/- ಮೀರಬಾರದು.
4. ಅರಿವು ಯೋಜನೆಯಲ್ಲಿ ಕುಟುಂಬದ ವಾರ್ಷಿಕ ಆದಾಯ ರೂ. 8,00,000/- ಮೀರಬಾರದು.
5. ಅರ್ಜಿದಾರರ 04 ಭಾವಿಚಿತ್ರವನ್ನು ಲಗತ್ತಿಸುವುದು.
6. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಮತ್ತು ಗರಿಷ್ಠ 55 ವರ್ಷಗಳು ಮೀರಬಾರದು. (ಅರಿವು ಯೋಜನೆಯಲ್ಲಿ ಈ ಷರತ್ತು ಅನ್ವಹಿಸುವುದಿಲ್ಲ.)
7. ಶೇ.33%ರಷ್ಟು ಮಹಿಳೆಯರಿಗೆ ಮೀಸಲಾತಿ ಇರುತ್ತದೆ. ಶೇ.05% ರಷ್ಟು ಅಂಗವಿಕಲರಿಗೆ ಮೀಸಲಾತಿ ಇರುತ್ತದೆ.
8. ಅರ್ಜಿದಾರರು ತಮ್ಮ ವಿಳಾಸದ ದೃಢೀಕರಣಕ್ಕಾಗಿ ಪಡಿತರ ಚೀಟಿ, ಆಧಾರ್ ಚೀಟಿ, ಗುರುತಿನ ಚೀಟಿ ಆಧಾರ್(ಗಖಅ) ಪ್ರತಿಯನ್ನು ಸಲ್ಲಿಸಬೇಕು ಮತ್ತು ಅದನ್ನು ಅವರ ಬ್ಯಾಂಕ್‌ನ ಉಳಿತಾಯ ಖಾತೆಗೆ ಹೊಂದಾಣಿಕೆ (ಲಿಂಕ್) ಮಾಡಬೇಕು.
9. ಈ ಹಿಂದೆ ನಿಗಮದ ಸೌಲಭ್ಯವನ್ನು ಪಡೆದವರು ಮತ್ತೆ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.

## 2. 4(1)B(ii) ರನ್ವಯ ಸಂಸ್ಥೆಯ ಜಿಲ್ಲಾ ಕಛೇರಿಯ ಅಧಿಕಾರಿಗಳ/ನೌಕರರ ಕರ್ತವ್ಯಗಳು ಹಾಗೂ ಹೊಣೆಗಾರಿಕೆಗಳು

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ಮಟ್ಟದ ಅಧಿಕಾರಿ/ಸಿಬ್ಬಂದಿ ಸಾಮರ್ಥ್ಯದ ಚಾರ್ಟ್ ವಿವರ ಈ ಕೆಳಕಂಡಂತಿದೆ.




ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ನಿ.

Scanned with CamScanner

ಜಿಲ್ಲಾ ವ್ಯವಸ್ಥಾಪಕರ ಹುದ್ದೆಯು ಭರ್ತಿಯಾಗಿದ್ದು, ಉಳಿದ 04 ಹುದ್ದೆಗಳು ಭರ್ತಿಯಾಗಿರುವುದಿಲ್ಲ. ಕಛೇರಿಯ ದೈನಂದಿನ ಕೆಲಸದ ನಿಮಿತ್ತ ಕಛೇರಿಯ ದೈನಂದಿನ ಕಾರ್ಯಗಳನ್ನು ನಿರ್ವಹಿಸಲು 04 ಜನ ಹೊರಗುತ್ತಿಗೆ ನೌಕರರನ್ನು ಕಿಯೋನಿಕ್ಸ್‌ವತಿಯಿಂದ ಕೆಲಸಕ್ಕೆ ನೇಮಿಸಿಕೊಂಡಿದ್ದು. ಅವರುಗಳ ಮೂಲಕ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

**1. ಜಿಲ್ಲಾ ಮಟ್ಟದ ಜಿಲ್ಲಾ ವ್ಯವಸ್ಥಾಪಕರ ಅಧಿಕಾರ ಮತ್ತು ಕರ್ತವ್ಯಗಳು:-**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ದಾವಣಗೆರೆ ಜಿಲ್ಲಾ ಕಛೇರಿಯು, ಕುರುಬರ ಹಾಸ್ಟೆಲ್ ಕಟ್ಟಡ, ಹದಡಿ ರಸ್ತೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ. ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾ ವ್ಯವಸ್ಥಾಪಕರು ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲಾ ಕಛೇರಿಯ ಪೂರ್ಣ ಆಡಳಿತ ನಿರ್ವಹಣೆ, ಸಾಲ ವಸೂಲಾತಿ, ಯೋಜನೆಯ ಅನುಷ್ಠಾನ ಮತ್ತು ಗುರಿ ಸಾಧನೆ, ಪ್ರಕಟಣೆ ನೀಡುವುದು, ಅರ್ಜಿ ಪಡೆದು ಜಿಲ್ಲಾ ಸಮಿತಿ ಅನುಮೋದನೆ ಪಡೆದು ಗುರಿಯನ್ವಯ ಸಾಲ ಸೌಲಭ್ಯಗಳನ್ನು ವಿತರಿಸಿ, ಲೆಕ್ಕ ಪತ್ರ ಇತ್ಯಾದಿ ಕಾರ್ಯಗಳನ್ನು ನಿರ್ವಹಣೆ ಮಾಡುವುದು.

**2. ಜಿಲ್ಲಾ ವ್ಯವಸ್ಥಾಪಕರುಗಳ ಕರ್ತವ್ಯಗಳು:-**

1. ಜಿಲ್ಲಾ ಕಛೇರಿಯ ಸಂಪೂರ್ಣ ಆಡಳಿತ ನಿರ್ವಹಣೆ, ಗುರಿ ಅನ್ವಯ ಎಲ್ಲಾ ಯೋಜನೆಯ ಅನುಷ್ಠಾನ ಮತ್ತು ಗುರಿ ಸಾಧನೆಯ ಜವಾಬ್ದಾರಿ.
2. ಅಗತ್ಯ ಸಭೆಗಳಿಗೆ ಹಾಜರಾಗುವುದು. ಯೋಜನೆಗಳ ಬಗ್ಗೆ ಜನ ಪ್ರತಿನಿಧಿಗಳಿಗೆ/ಸಂಘ ಸಂಸ್ಥೆಗಳಿಗೆ ಮತ್ತು ಸಾರ್ವಜನಿಕರಿಗೆ ಮಾಹಿತಿ ನೀಡುವುದು.
3. ವಿವಿಧ ಇಲಾಖೆಗಳು, ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಯೋಜನೆಯ ಅನುಷ್ಠಾನಕ್ಕಾಗಿ ಸಮನ್ವಯಾಧಿಕಾರಿಯಾಗಿ ಕೆಲಸ ನಿರ್ವಹಿಸುವುದು.
4. ಸರ್ಕಾರದ ವಿವಿಧ ಆದೇಶಗಳಲ್ಲಿ ಮತ್ತು ನಿಗಮದ ಆದೇಶ, ಪತ್ರ ಮತ್ತು ಸುತ್ತೋಲೆಗಳಲ್ಲಿ ವಹಿಸಿದ ಜವಾಬ್ದಾರಿಗಳನ್ನು ನಿರ್ವಹಿಸುವುದು.
5. ನಿಗಮದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ವಹಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು.
6. ತಿಂಗಳಿಗೆ ಕನಿಷ್ಠ 10 ದಿನಗಳ ಪ್ರವಾಸ ಮಾಡಿ. ಸಾಲ ವಸೂಲಾತಿ ಮತ್ತು ಘಟಕ ತಪಾಸಣೆ ಮಾಡುವುದು.
7. ನಿಗಮದ ವಿವಿಧ ಯೋಜನೆಗಳ ಅನುಷ್ಠಾನದೊಂದಿಗೆ ಸಂಬಂಧಿಸಿದ ವಿವಿಧ ರಿಜಿಸ್ಟರ್‌ಗಳ ನಿರ್ವಹಣೆ, ಸಾಲದ ದಸ್ತಾವೇಜುಗಳ ನಿರ್ವಹಣೆಯ ಪೂರ್ಣ ಜವಾಬ್ದಾರಿ.
8. ಪ್ರತಿ ದಿನ ಕ್ಯಾಶ್ ಪುಸ್ತಕವನ್ನು ದೃಢೀಕರಿಸುವುದು. ಇಂಪ್ರೆಸ್ಟ್ ವೋಚರ್‌ಗಳನ್ನು ದೃಢೀಕರಿಸುವುದು, ಕೇಂದ್ರ ಕಛೇರಿಯಿಂದ ಇಂಪ್ರೆಸ್ಟ್ ಹಣ ಪಡೆಯುವುದು, ಕೇಂದ್ರ ಕಛೇರಿಯ ಲೆಕ್ಕ ಪತ್ರಗಳೊಡನೆ ಜಿಲ್ಲಾ ಲೆಕ್ಕ ಪತ್ರಗಳನ್ನು ಸಮನ್ವಯ ಮಾಡಿಕೊಳ್ಳುವುದು.
9. ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ಸ್ಥಿರಾಸ್ತಿ ಬಗ್ಗೆ ಕೇಂದ್ರ ಕಛೇರಿಗೆ ದೃಢೀಕರಣ ನೀಡುವುದು.
10. ವಿವಿಧ ಯೋಜನೆಗಳ ಅನುಷ್ಠಾನ ಸೇರಿದಂತೆ ಅವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು ಮತ್ತು ಸಾಲದ ಪ್ರಸ್ತಾವನೆಗಳನ್ನು ಬಿಡುಗಡೆ ಮಾಡಿಸುವುದು.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ನಿ.
ದಾವಣಗೆರೆ ಜಿಲ್ಲೆ.

Scanned with CamScanner

11. ಪ್ರತಿ ವರ್ಷವು ಆಡಿಟ್‌ಗೆ ಸಂಬಂಧಿಸಿದ ಮಾಹಿತಿ ಸಿದ್ಧಪಡಿಸುವುದು.
12. ಸಾಲದ ದಾಖಲಾತಿಗಳನ್ನು ಪಡೆಯುವುದು.
13. ಅಭಿವೃದ್ಧಿ ಅಧಿಕಾರಿ ಮತ್ತು ಸಹಾಯಕ ಅಭಿವೃದ್ಧಿ ಅಧಿಕಾರಿ ಹುದ್ದೆಗಳು ಖಾಲಿ ಇದ್ದ ಪಕ್ಷದಲ್ಲಿ ಎಲ್ಲಾ ಕೆಲಸಗಳನ್ನು ಜಿಲ್ಲಾ ವ್ಯವಸ್ಥಾಪಕರವರೇ ನಿರ್ವಹಿಸುವುದು.
14. ಜಿಲ್ಲಾ ವ್ಯವಸ್ಥಾಪಕರು ನಿಗಮದ ಜಿಲ್ಲಾ ಮಟ್ಟದ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿದ್ದು, ಅರ್ಜಿದಾರರು ಕೋರುವ ಮಾಹಿತಿಯನ್ನು ಒದಗಿಸುವುದು.
15. ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ನೋಟೀಸ್ ನೀಡುವುದು ಮತ್ತು ಸಾಲ ವಸೂಲಾತಿ ಕಾರ್ಯಕ್ಕೆ ಯೋಜನೆ ರೂಪಿಸುವುದು.
16. ವಿವಿಧ ಇಲಾಖೆಗಳ ಸಹಯೋಗದೊಡನೆ ನಿಗಮದ ಯೋಜನೆಗಳ ಬಗ್ಗೆ 'ಅರಿವು' ಕಾರ್ಯಕ್ರಮ ರೂಪಿಸುವುದು.
17. ಗಂಗಾಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ ವಿದ್ಯುತ್ ಇಲಾಖೆ ಜೊತೆ ಸಮನ್ವಯ ಸಾಧಿಸುವುದು.
18. ಕೇಂದ್ರ ಕಛೇರಿ ಸಭೆಗಳಿಗೆ ಹಾಜರಾಗುವುದು ಮತ್ತು ಘಟಕಗಳ ತಪಾಸಣೆ.

**4(1)(ಬಿ)(iii) ರನ್ವಯ, ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಮಾರ್ಗಗಳು ಸೇರಿದಂತೆ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳು:**

ಅಲ್ಪಸಂಖ್ಯಾತ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯಕ್ರಮವನ್ನು ರೂಪಿಸಿ ನಿರ್ದೇಶಕ ಮಂಡಳಿ/ಸರ್ಕಾರದ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ. ಅನುಷ್ಠಾನದಲ್ಲಿನ ವಿಧಿ ವಿಧಾನಗಳ ಬಗ್ಗೆ ಸೂಕ್ತ ಆದೇಶ, ಸುತ್ತೋಲೆ ನೀಡಲಾಗುತ್ತದೆ. ಸಾಲಕ್ಕೆ ದಸ್ತಾವೇಜುಗಳನ್ನು ಮತ್ತು ನಿರ್ವಹಿಸಬೇಕಾದ ಲೆಕ್ಕಪತ್ರಗಳನ್ನು ಮತ್ತು ಅಧಿಕಾರಿಯ ಹೊಣೆಗಾರಿಕೆಯನ್ನು ತಿಳಿಸಲಾಗುತ್ತದೆ. ನಿಗಮದ ಕಾರ್ಯನಿರ್ವಹಣೆಯ ವಿಧಿ, ವಿಧಾನಗಳನ್ನು ಪ್ರಗತಿಯನ್ನು ಕೇಂದ್ರ ಕಛೇರಿ ಹಂತದಲ್ಲಿ ಹಾಗೂ ಅಲ್ಪಸಂಖ್ಯಾತ ಆಯೋಗವು ಸಹ ಸಮೀಕ್ಷಿಸಿ ಸೂಕ್ತ ಸೂಚನೆ/ನಿರ್ದೇಶನಗಳನ್ನು ನೀಡುವುದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಉಸ್ತುವಾರಿ ಸಚಿವರು ವಿವಿಧ ಸಮಿತಿಗಳು ಮೇಲುಸ್ತುವಾರಿ ಕಾರ್ಯಗಳನ್ನು ಸಮೀಕ್ಷಾ ಕಾರ್ಯಗಳನ್ನು ನಿರ್ವಹಣೆ ಮಾಡುತ್ತವೆ.

**4(1)(ಬಿ)(iv) ಮತ್ತು4(1)(ಬಿ)(V) ರನ್ವಯ ಸಂಸ್ಥೆಯ ಕಾರ್ಯನಿರ್ವಹಣೆಗೆ ರೂಪಿಸಿರುವ ಸೂತ್ರಗಳು ಮತ್ತು ಅನುಸರಿಸಲಾಗುವ ನಿಯಮಾವಳಿಗಳು, ನಿರ್ದೇಶನಗಳು/ಅನುಸೂಚಿಗಳು;**

ಸರ್ಕಾರವು ಆಯಾ ವರ್ಷಗಳಲ್ಲಿ ನೀಡುವ, ಅನುದಾನಗಳ ಹಣವನ್ನು ಅವಲಂಬಿಸಿ ಜಿಲ್ಲೆಯ ಜನ ಸಂಖ್ಯೆಯನ್ನಾಧರಿಸಿ ಜಿಲ್ಲಾವಾರು ಭೌತಿಕ ಗುರಿಗಳನ್ನು ನಿಗಮದ ಕೇಂದ್ರ ಕಛೇರಿಯ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ರೂಪಿಸಲಾಗುವುದು. ಅದರಂತೆ ನಿಗಮದ ಕೇಂದ್ರ ಕಛೇರಿಯಿಂದ ನೀಡಿರುವ ಗುರಿಯನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ ಲೀಡ್‌ಬ್ಯಾಂಕ್ ಮೂಲಕ ಶಾಖಾವಾರು ಗುರಿಯನ್ನು ನಿಗಧಿಪಡಿಸಲಾಗುತ್ತದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳ ಕಛೇರಿಯಲ್ಲಿ ಗುರಿ ಮತ್ತು ಅನುಸರಿಸಬೇಕಾದ ವಿಧಾನದ ಬಗ್ಗೆ ಸಾರ್ವಜನಿಕರಿಗೆ ತಿಳಿಸಲು ನಿಗಮವು ಕ್ರಮ ವಹಿಸಿರುತ್ತದೆ.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ನಿ.
ದಾವಣಗೆರೆ ಜಿಲ್ಲೆ.

Scanned with CamScanner

ಸಾರ್ವಜನಿಕರಿಗೆ ನಿಗಮದ ಕಾರ್ಯಚಟುವಟಿಕೆಗಳ ಪರಿಚಯವನ್ನು ಮತ್ತು ಮಾಹಿತಿಯನ್ನು ನೀಡಲು ಯೋಜನೆಗಳ ವಿವರಗಳನ್ನೊಳಗೊಂಡ ಕಿರುಹೊತ್ತಿಗೆಗಳನ್ನು ಮುದ್ರಿಸಿ ವಿತರಿಸಲಾಗುತ್ತಿದೆ. ಹಾಗೂ ನಿಗಮದ ಕೇಂದ್ರ ಕಛೇರಿ ಮತ್ತು ಜಿಲ್ಲಾ ಕಛೇರಿಗಳ ಸೂಚನಾ ಫಲಕಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಆಯಾ ಯೋಜನೆಯ ಗುರಿಯನ್ನು ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಲು ಕ್ರಮವಹಿಸಲಾಗಿದೆ.

**4(1)(ಬಿ)(VIII) ರನ್ವಯ ಸಂಸ್ಥೆಯ ಉದ್ದೇಶಗಳನ್ನು ಈಡೇರಿಸಲು 2 ಅಥವಾ ಅದಕ್ಕಿಂತ ಹೆಚ್ಚು ಸದಸ್ಯರಿಂದ ರಚಿಸಲ್ಪಟ್ಟ ಸಮಿತಿ, ಪರತ್ತು, ಮಂಡಳಿಗಳು ಮತ್ತು ಅದರ ಹೇಳಿಕೆಗಳು ಹಾಗೂ ಆ ಪರಿಷತ್ತು , ಮಂಡಳಿ, ಸಮಿತಿಯ ಸದಸ್ಯರು ನಡೆಸಿದ ಸಭೆಯ ನಡವಳಿಗಳು/ನಿರ್ಣಯಗಳು :**

- ವಿಧಾನಸಭಾ ಕ್ಷೇತ್ರ ಮಟ್ಟದಲ್ಲಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಶ್ರಮಶಕ್ತಿ ಸಾಲ ಯೋಜನೆ, ಕಿರುಸಾಲ ಯೋಜನೆ, ಮೈಕ್ರೋ ಕೋವಿಡ್-19 (ವೈಯಕ್ತಿಕ ಮಹಿಳೆಯರಿಗೆ) ಸಾಲ ಯೋಜನೆ ಮತ್ತು ಗಂಗಾ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕ್ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯಲ್ಲಿ ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ ಶಾಸಕರು, ತಾಲ್ಲೂಕು ಆಯ್ಕೆ ಸಮಿತಿಯ ಸಹ ಅಧ್ಯಕ್ಷರು ಆಗಿರುತ್ತಾರೆ. ಕಾರ್ಯನಿರ್ವಹಣಾಧಿಕಾರಿಗಳು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮಂಗಳೂರು ವಿದ್ಯುಚ್ಛಕ್ತಿ ಕಂಪನಿ. ಸಂಬಂಧಿಸಿದ ತಾಲ್ಲೂಕು ತಹಸೀಲ್ದಾರರು, ,ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ತಾಲ್ಲೂಕ್ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸಹಾಯಕರಾಗಿ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವರು. ತಾಲ್ಲೂಕ್ ಆಯ್ಕೆ ಸಮಿತಿಯು ಕೈಗೊಳ್ಳುವ ನಿರ್ಣಯಗಳನ್ನು ಪಾಲಿಸುವುದು.
- ನಿಗಮವು ಅನುಷ್ಠಾನಗೊಳಿಸುತ್ತಿರುವ ಟ್ಯಾಕ್ಸಿ/ಗೂಡ್ಸ್/ಆಟೋ ರಿಕ್ಷಾ ವಾಹನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಆಯ್ಕೆ ಸಮಿತಿಯನ್ನು ರಚಿಸಲಾಗುತ್ತದೆ. ಈ ಜಿಲ್ಲಾ ಆಯ್ಕೆ ಸಮಿತಿಯಲ್ಲಿ ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಜಿಲ್ಲಾ ಅಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸದಸ್ಯರಾಗಿರುತ್ತಾರೆ. ನಿಗಮದ ಜಿಲ್ಲಾ ವ್ಯವಸ್ಥಾಪಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಜಿಲ್ಲಾ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸಹಾಯಕರಾಗಿ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವರು. ಜಿಲ್ಲಾ ಆಯ್ಕೆ ಸಮಿತಿಯು ಕೈಗೊಳ್ಳುವ ನಿರ್ಣಯಗಳನ್ನು ಪಾಲಿಸುವುದು.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿ.
ದಾವಣಗೆರೆ ಜಿಲ್ಲೆ.

Scanned with CamScanner

**8) 4(1)(ಬಿ)( ١ಥ)ರನ್ವಯ ಸಂಸ್ಥೆಯ ಅಧಿಕಾರಿಗಳ ಮತ್ತು ನೌಕರರ ದೂರವಾಣಿ ವಿವರಗಳು:**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧಿಕೃತ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ ಹಾಗೂ ಅಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ ಈ ಮುಂದಿನಂತೆ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಿದೆ.

**ಸಂಸ್ಥೆಯ ವಿಳಾಸ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ),**
**ಕುರುಬರ ಹಾಸ್ಟೆಲ್‌ಕಟ್ಟಡ, ಹದಡಿರಸ್ತೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ**
**ದೂರವಾಣಿ ಸಂಖ್ಯೆ: 08192-232349**
**ಅಧಿಕಾರಿಯ ಹೆಸರು ಮತ್ತು ದೂರವಾಣಿ ಸಂಖ್ಯೆ: ಸಲೀಂ ಪಾಷಾ – 82779 44215**

**4(1)(ಬಿ)(ಥು)ರನ್ವಯ ಸಬ್ಸಿಡಿ ಕಾರ್ಯಕ್ರಮಗಳ ಅನುಷ್ಠಾನ ವಿಧಾನಗಳು, ಈ ಲೆಕ್ಕ ಶೀರ್ಷಿಕೆಯಲ್ಲಿ ಹಂಚಿಕೆ ಮಾಡಿದ ಹಣ ಮತ್ತು ಫಲಾನುಭವಿಗಳ ವಿವರ. (2022-23ನೇ ಸಾಲು)**

**1) ಅರಿವು ಯೋಜನೆ:-**

- ಈ ಯೋಜನೆಯಡಿ ಭೌತಿಕ ಗುರಿ 125 ಮತ್ತು ಆರ್ಥಿಕ 50.03 ಲಕ್ಷಗಳ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಆನ್‌ಲೈನ್ ಮುಖಾಂತರ 212 ಅರ್ಜಿಗಳು ಸ್ವೀಕೃತಗೊಂಡಿರುತ್ತದೆ.
- ವೃತ್ತಿಪರ/ತಾಂತ್ರಿಕ/ಸ್ನಾತಕ ಪದವಿ/ಸ್ನಾತಕೋತ್ತರ ಪದವಿ ಶಿಕ್ಷಣ ಅಂದರೆ ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್, ಸರ್ಕಾರದ ಸೇರ್ಪಡೆ ಆದೇಶ ಕೋರ್ಸ್‌ನ್ನು ಮಾಡಬಯಸುವ ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯ ದೊರಕಿಸಿ ಕೊಡಲಾಗುವುದು.
- ಪ್ರತಿ ವರ್ಷಕ್ಕೆ ರೂ.30,000/- ದಿಂದ 2,00,000/-ಗಳವರೆಗೆ ಸಾಲವನ್ನು ಮಂಜೂರು ಮಾಡಲಾಗುತ್ತದೆ.
- ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿದಲ್ಲಿ, ಜಿಲ್ಲಾ ಕಛೇರಿಯ ಲಿಂಕ್ ನಿಂದಾಗಿ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಕಳುಹಿಸಿ ಕೊಡಲಾಗುವುದು. ನಂತರ ಕೇಂದ್ರ ಕಛೇರಿಯಿಂದ ನೇರವಾಗಿ ಸಂಬಂಧಪಟ್ಟ ಕಾಲೇಜು ಪ್ರಾಂಶುಪಾಲರ ಖಾತೆಗೆ ಸಾಲದ ಮೊತ್ತವನ್ನು ವರ್ಗಾವಣೆ ಮಾಡಲಾಗುವುದು.

**2) ಶ್ರಮಶಕ್ತಿ ಯೋಜನೆ:-**

- ಈ ಯೋಜನೆಯಡಿ ಭೌತಿಕ ಗುರಿ 17 ಮತ್ತು ಆರ್ಥಿಕ 8.50 ಲಕ್ಷಗಳ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಆನ್‌ಲೈನ್ ಮುಖಾಂತರ 140 ಅರ್ಜಿಗಳು ಸ್ವೀಕೃತಗೊಂಡಿರುತ್ತದೆ.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ನಿ.
ದಾವಣಗೆರೆ ಜಿಲ್ಲೆ.

Scanned with CamScanner

आज़ादी का अमृत महोत्सव

- ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿ ಕುಲಕಸುಬುದಾರರಿಗೆ ಸಾಲಸೌಲಭ್ಯ ನೀಡಲಾಗುತ್ತದೆ.
- ಸದರಿ ಯೋಜನೆಯಲ್ಲಿ ತಲಾ 12,500–00 ಸಾಲ ಮತ್ತು 12,500–00 ಸಹಾಯಧನ ನೀಡಲಾಗುವುದು.
- ಅರ್ಹ ಫಲಾಪೇಕ್ಷಿಗಳನ್ನು ಆಯಾಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.
- ಸಾಲದ ಮೊತ್ತಕ್ಕೆ ಶೇ.4ರಷ್ಟು ಬಡ್ಡಿ ವಿಧಿಸಲಾಗುವುದು.

**3) ಕಿರು ಸಾಲ ಯೋಜನೆ:–**

- ಈ ಯೋಜನೆಯಡಿ ಭೌತಿಕ ಗುರಿ 70 ಮತ್ತು ಆರ್ಥಿಕ 7.00 ಲಕ್ಷಗಳ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ 02 ಸ್ವ–ಸಹಾಯ ಸಂಘದಿಂದ 20 ಅರ್ಜಿಗಳು ಸ್ವೀಕೃತಗೊಂಡಿರುತ್ತದೆ.
- ಮಿಶ್ರ ಆರ್ಥಿಕ ಚಟುವಟಿಕಗಳಿಗೆ ಸಾಲಸೌಲಭ್ಯ ನೀಡಲಾಗುತ್ತದೆ.
- ಸದರಿ ಯೋಜನೆಯಲ್ಲಿ ತಲಾ 5,000–00 ಸಾಲ, 5,000–00 ಸಹಾಯಧನ ನೀಡಲಾಗುವುದು.
- ಅರ್ಹ ಫಲಾಪೇಕ್ಷಿಗಳನ್ನು ಆಯಾಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.

**4) ಗಂಗಾ ಕಲ್ಯಾಣ ಯೋಜನೆ:–**

- ಈ ಯೋಜನೆಯಡಿ ಭೌತಿಕ ಗುರಿ 07 ಮತ್ತು ಆರ್ಥಿಕ 14.00 ಲಕ್ಷಗಳ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಆನ್‌ಲೈನ್ ಮುಖಾಂತರ 23 ಅರ್ಜಿಗಳು ಸ್ವೀಕೃತಗೊಂಡಿರುತ್ತದೆ.
- ಕನಿಷ್ಠ 1.00 ಎಕೆರೆಯಿಂದ 5.00 ಎಕೆರೆ ಒಳಗೆ ಜಮೀನು ಹೊಂದಿರುವ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆದು ವಿದ್ಯೂದ್ಧಿಕರಣ ನೀಡಲಾಗುವುದು.
- ಸದರಿ ಯೋಜನೆಯಡಿಯಲ್ಲಿ ರೂ. 2,00,000/– ಗಳು ಸಹಾಯಧನವಾಗಿರುತ್ತದೆ.
- ಅರ್ಹ ಫಲಾಪೇಕ್ಷಿಗಳನ್ನು ಆಯಾಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.

**5. ಮೈಕ್ರೋ ಕೋವಿಡ್–19)(ವೈಯಕ್ತಿಕ ಮಹಿಳೆಯರಿಗೆ) ಸಾಲ ಯೋಜನೆ:**

- ಈ ಯೋಜನೆಯಡಿ ಭೌತಿಕ ಗುರಿ 280 ಮತ್ತು ಆರ್ಥಿಕ ಗುರಿ 28.00 ಲಕ್ಷಗಳ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಆನ್‌ಲೈನ್ ಮುಖಾಂತರ 280 ಅರ್ಜಿಗಳು ಸ್ವೀಕೃತಗೊಂಡಿರುತ್ತದೆ.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ನಿ.
ದಾವಣಗೆರೆ ಜಿಲ್ಲೆ.

Scanned with CamScanner

- ಸದರಿ ಯೋಜನೆಯಲ್ಲಿ ರೂ. 10,000-00 ಸಾಲ ನೀಡಲಾಗುವುದು ಅದರಲ್ಲಿ ರೂ. 8,000/- ಸಾಲ ಹಾಗೂ ರೂ. 2,000/- ಸಹಾಯಧನವಾಗಿರುತ್ತದೆ.
- ಫಲಾನುಭವಿಗಳನ್ನು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುವುದು.

**6. ಟ್ಯಾಕ್ಸಿ/ಗೂಡ್ಸ್/ಆಟೋ ರಿಕ್ಷಾ ವಾಹನ ಖರೀದಿಗಾಗಿ ಸಹಾಯಧನ,:-**

- ಈ ಯೋಜನೆಯಡಿ ಭೌತಿಕ ಗುರಿ 37 ಮತ್ತು ಆರ್ಥಿಕ ಗುರಿ 27.75 ಲಕ್ಷಗಳ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಆನ್‌ಲೈನ್ ಮುಖಾಂತರ 29 ಅರ್ಜಿಗಳು ಸ್ವೀಕೃತಗೊಂಡಿರುತ್ತದೆ.
- ತಲಾ 75,000/- ರೂ. ಸಹಾಯಧನ ಹಾಗೂ ಉಳಿದ ಹಣ ಬ್ಯಾಂಕ್ ಸಾಲ ಪಡೆಯಬಹುದು.
- ಫಲಾನುಭವಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುವುದು

**4(1)(ಬಿ)( ಥುತ)ಮತ್ತು 4(1)(ಬಿ)(ಥತ) ರನ್ವಯ ಸಂಸ್ಥೆಯು ಹೊಂದಿರುವ/ಸಂಸ್ಥೆಯಿಂದ ದೊರೆಯುವ ಇಲ್ಲವೆ ಎಲೆಕ್ಟ್ರಾನಿಕ್ ಡಿಸ್ಕ್‌ನಲ್ಲಿ ಅಳವಡಿಸಿರುವ ಸಂಸ್ಥೆಯ ಮಾಹಿತಿ ವಿವರ ಹಾಗೂ ನಾಗರೀಕರಿಗೆ ಮಾಹಿತಿಯನ್ನು ಪಡೆಯುವ ವಿವರ ಮತ್ತು ಸಂಸ್ಥೆಯ ಕೆಲಸದ ಅವಧಿ ಇತ್ಯಾದಿ.**

ನಿಗಮದಿಂದ ಲಭ್ಯವಿರುವ ಯೋಜನೆಗಳ ಮಾಹಿತಿಯನ್ನು ಮತ್ತು ಸಾರ್ವಜನಿಕರು ಸಂಸ್ಥೆಯಿಂದ ಸೌಲಭ್ಯ ಪಡೆಯುವಲ್ಲಿ ಸಲ್ಲಿಸಬೇಕಾದ ಅರ್ಜಿ ಹಾಗೂ ಮಾಹಿತಿಯನ್ನು ನಿಗಮದ ಕೇಂದ್ರ ಕಛೇರಿಯ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ಇದರ ಜೊತೆ ಈ ಕೆಳಕಂಡ ಕ್ರಮಗಳನ್ನು ಪ್ರಚಾರಕ್ಕಾಗಿ ವಹಿಸಲಾಗಿದೆ.

1. ನಿಗಮದ ಯೋಜನೆಗಳ ಪ್ರಚಾರಕ್ಕೆ ಸಂಬಂಧಿಸಿದಂತೆ ಕರ ಪತ್ರಗಳನ್ನು/ಕಿರುಹೊತ್ತಿಗೆಗಳನ್ನು ಮುದ್ರಣ ಮಾಡಿ ಚರ್ಚ್ ಮಸೀದಿಗಳಿಗೆ ಮತ್ತು ಜೈನ ಬಸೀದಿಗಳಿಗೆ ಕಳುಹಿಸಿ ಕೊಡಲಾಗಿದೆ.
2. ಜಿಲ್ಲಾ ವ್ಯವಸ್ಥಾಪಕರು ಸ್ಥಳಿಯ ಪತ್ರಕೆಗಳಲ್ಲಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ನೀಡಿರುತ್ತಾರೆ.
3. ವೃತ್ತಿ ಕುಲಕಸುಬುದಾರರ ಮುಖಂಡರನ್ನು ಕೆಲವು ಜನಾಂಗಗಳ ಮುಖಂಡರನ್ನು ಆಹ್ವಾನಿಸಿ ಸಭೆಯನ್ನು ನಡೆಸಲಾಗಿದೆ. ಅವರಿಗೂ ಸಹ ಕರ ಪತ್ರಗಳನ್ನು/ಕಿರು ಹೊತ್ತಿಗೆಗಳನ್ನು ನೀಡಿ ಅವರುಗಳ ಸಂಘ ಸಂಸ್ಥೆಗಳ ಪ್ರತಿನಿಧಿಗಳಿಗೆ ನೀಡುವಂತೆ ತಿಳಿಸಲಾಗಿರುತ್ತದೆ.
4. ನಿಗಮದ ಜಿಲ್ಲೆಯ ವ್ಯವಸ್ಥಾಪಕರು ಪ್ರವಾಸ ಕಾಲದಲ್ಲಿ ವಿವಿಧ ಯೋಜನೆಗಳಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳೊಂದಿಗೆ ಘಟಕ ತಪಾಸಣೆಗಳನ್ನು ನಿರ್ವಹಿಸುತ್ತಾರೆ.
5. ಪ್ರತಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಆಯಾ ವರ್ಷದ ಗುರಿಯನ್ನು ನಮೂದಿಸಿ ಯೋಜನೆಗಳ ವಿವರಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ನಿ.
ದಾವಣಗೆರೆ ಜಿಲ್ಲೆ.

Scanned with CamScanner

ಕೊಡಲಾಗುತ್ತದೆ. ಅವರೂ ಸಹ ಸುದ್ದಿ ರೂಪದಲ್ಲಿ ನಿಗಮದ ಯೋಜನೆಗಳ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ ಪ್ರಚಾರ ಮಾಡುತ್ತಾರೆ.

6. ಅರಿವು ಯೋಜನೆಯ ಬಗ್ಗೆ ಎಲ್ಲಾ ವೃತ್ತಿಪರ ಕಾಲೇಜುಗಳ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲು ಸಂಕ್ಷಿಪ್ತ ಮಾಹಿತಿಯನ್ನು ನೀಡಿ ಕಳುಹಿಸಿ ಕೊಡಲಾಗಿರುತ್ತದೆ. ಅದೇ ರೀತಿ ನಿಗಮದ ಯೋಜನೆಗಳ ಸಂಕ್ಷಿಪ್ತ ಮಾಹಿತಿಯನ್ನು ಎಲ್ಲಾ ತಾಲ್ಲೂಕು ಮಾಹಿತಿ ಕೇಂದ್ರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಕಳುಹಿಸಿ ಕೊಡಲಾಗಿರುತ್ತದೆ.
7. ನಿಗಮದ ಜಿಲ್ಲಾ ವ್ಯವಸ್ಥಾಪಕರು ಘಟಕ ಪರಶೀಲನೆ ಮತ್ತು ಸಾಲ ವಸೂಲಾತಿಗೆ ಗ್ರಾಮಗಳಿಗೆ ಭೇಟಿ ನೀಡಿದಾಗ ಯೋಜನೆಗಳ ಬಗ್ಗೆ ಆ ಗ್ರಾಮದ ಜನರಿಗೆ ವಿವರಣೆ ನೀಡುತ್ತಾರೆ.
8. ನಿಗಮವು **ಕುರುಬರ ಹಾಸ್ಟೆಲ್‌ಕಟ್ಟಡ, ಹದಡಿರಸ್ತೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ** ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.
9. ಸಂಸ್ಥೆಯ ಕೆಲಸದ ಅವಧಿ: ಸೋಮವಾರದಿಂದ ಶನಿವಾರದವರೆಗೆ ಬೆಳಗ್ಗೆ 10-00 ಗಂಟೆಯಿಂದ ಸಾಯಂಕಾಲ 5.30 ಗಂಟೆಯವರೆಗೆ ಕಾರ್ಯ ನಿರ್ವಹಿಸುತ್ತದೆ. ಎಲ್ಲಾ ಭಾನುವಾರ, ಪ್ರತಿ ತಿಂಗಳ 2ನೇ ಮತ್ತು 4ನೇ ಶನಿವಾರ ಮತ್ತು ಸರ್ಕಾರ ಘೋಷಿಸಿರುವ ರಜಾ ದಿನಗಳಂದು ಸಂಸ್ಥೆಯು ಮುಚ್ಚಿರುತ್ತದೆ.

ತಮ್ಮ ನಂಬುಗೆಯ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ
ಅಭಿವೃದ್ಧಿ ನಿಗಮ(ನಿ)
ದಾವಣಗೆರೆ ಜಿಲ್ಲೆ.

Scanned with CamScanner